ಸರ್ವೋದಯ ಪದ್ಯಾವಳಿ



ಕರ್ನಾಟಕ ಸರ್ವೋದಯ "ಗಾಂಧಿ ಪ್ರಕಾಶನ"

[illegible]

॥ಜೈ ಜಗತ್॥

ಶೀಲವು ಬೇಕು

ಶೀಲವು ಬೇಕು ಶಾಂತಿಯು ಬೇಕು ವಿಶ್ವದ ಜನಕೆಲ್ಲಾ
ಸುಪ್ತ ಚೇತನ ಮೊಳಗಿಸಿ ಇಂದು
ಚಿತ್ತ ಸ್ಥೈರ್ಯವ ತಾಳಿರಿ ಇಂದು
ಶಕ್ತ ಮಾತೆಯ ಧೀರರು ಎಂದು ಸಾಗುತ ನಾವೆಲ್ಲ
ಸಾಗುತ ನಾವೆಲ್ಲ ॥೧॥

ಕರುಣೆಯು ಶಾಂತಿಯು ಸಾಧನ ರೂಪ
ಬುದ್ಧ ಮಹಾತ್ಮನ ಅಮರ ಸ್ವರೂಪ
ಸಮತೆಯ ಹರಡುವ ಜೀವನ ದೀಪ ಹಚ್ಚುವಾ ನಾವೆಲ್ಲ
ಹಚ್ಚುವಾ ನಾವೆಲ್ಲ ॥೨॥

ಸತ್ಯ ಅಹಿಂಸೆಯು ಗೆಲುವಿನ ಸಾಧನ
ಸಂತ ಶರಣರ ಹಾದಿಯೇ ಪಾವನ
ಚಿತ್ತ ಶುದ್ಧಿಯ ತ್ಯಾಗದ ಜೀವನ ನಡೆಸುವಾ ನಾವೆಲ್ಲ
ನಡೆಸುವಾ ನಾವೆಲ್ಲ ॥೩॥

ವೈರವ ಅಳಿಸಿ ಪ್ರೇಮವ ಬೆಳೆಸಿ
ವಿಶ್ವ ಸಮತೆಯ ಭಾವನೆ ಹರಿಸಿ
ಸಜ್ಜನ ದುರ್ಜನ ಭೇದವ ಮರೆಸಿ ಬದುಕುವಾ ನಾವೆಲ್ಲ
ಬದುಕುವಾ ನಾವೆಲ್ಲ ॥೪॥

ಸರ್ವೋದಯ ಪದ್ಯಾವಳಿ

ರಚಿಸಿದವರು

ಶ್ರೀ ಹುಲಕುಂದ ಭೀಮಕವಿ ಮತ್ತು ಇತರರು

ಪ್ರಕಾಶನ

ಕರ್ನಾಟಕ ಸರ್ವೋದಯ ಗೀತಾ ಪ್ರವಚನ ಹಾಗೂ ದೇವನಾಗರೀಲಿಪಿ
ಪ್ರಚಾರ ಪಾದಯಾತ್ರೆ ಮಂಡಲಿ
ಶ್ರೀ ಗಿರೀಶ್ ಆಶ್ರಮ, ವಿದ್ಯಾನಗರ, ಹುಬ್ಬಳ್ಳಿ.

SARVODAYA PADYAVALI—Poems Relating to "Sarvodaya Movement, Written by Hulakunda Bhima Kavi & others. Published by Karnataka Sarvodaya Geetha Pravachana and Devangarilipi Prachara Padayatra Mandali. Sri Girish Ashrama, Vidyanagar Hubli.

ಬೆಲೆ : 1-50 ಪೈಸೆ

ಮುದ್ರಕರು :
ಪೂರ್ಣಿಮಾ ಎಂಟರ್‌ಪ್ರೈಸಸ್, ಮುದ್ರಕರು ಮತ್ತು ಪ್ರಕಾಶಕರು
ಮೈಸೂರು-೧

ಆಚಾರ್ಯ ವಿನೋಬಾಜಿಯವರ

ಸಂದೇಶ

ಅನೇಕ ವರ್ಷಗಳಿಂದ ಕರ್ನಾಟಕದ ಹಳ್ಳಿಗಳಲ್ಲಿ ಶ್ರೀ ಸಿದ್ಧರಾಮ ಗುರೂಜಿಯವರು ಪಾದಯಾತ್ರೆ ಮಾಡಿದ್ದಾರೆ. ಈಗ ನನ್ನ ಸೂಚನೆಯ ಮೇರೆಗೆ ಗೀತಾ ಪ್ರವಚನವನ್ನು ಎಲ್ಲ ಕಡೆಗೆ ಮುಟ್ಟಿಸುವ ಸಲುವಾಗಿ ಮತ್ತೆ ಹಳ್ಳಿಗಳಲ್ಲಿ ಪಾದಯಾತ್ರೆ ಮಾಡಲಿದ್ದಾರೆ. ಅದರ ಜೊತೆಗೆ "ನಾಗರೀಲಿಪಿ ಹಾಗೂ ಕನ್ನಡ ನಾಗರೀ ಪತ್ರಿಕೆಯ ಪ್ರಚಾರವನ್ನು ಮಾಡಲಿದ್ದಾರೆ."

ಗೀತೆಯಂತಹ ಆಧ್ಯಾತ್ಮಿಕ ಗ್ರಂಥಗಳಿಂದ ಸಮಾಜ ಶುದ್ಧಿಯು ಹಾಗೂ ನಾಗರೀಲಿಪಿಯಿಂದ ಭಿನ್ನ ಭಿನ್ನ ಭಾಷಿಕರನ್ನು ಒಂದುಗೂಡಿಸುವ ಕೆಲಸವನ್ನು ಶ್ರೀ ಸಿದ್ಧರಾಮ ಗುರೂಜಿಯವರು ಸಿದ್ಧಮಾಡಲಿದ್ದಾರೆ. ಕರ್ನಾಟಕದ ಜನತೆಯ ಒಳ್ಳೇ ಸಹಯೋಗವು ಈ ಕಾರ್ಯದಲ್ಲಿ ದೊರೆಯುಬಹುದೆಂದು ನನಗೆ ಆಶೆ ಇದೆ.

ಬ್ರಹ್ಮ ವಿದ್ಯಾಮಂದಿರ ಪವನಾರ ಬಾಬಾರವರ ಶುಭ ಕಾಮನೆ

ವರ್ಧಾ, ತಾ ೨೩-೧-೬೭ ರಾಮ ಹರಿ

ಸರ್ವೋದಯ ಕಾರ್ಯಕರ್ತರಿಂದ ಪಾದಯಾತ್ರೆ
"ಗೀತಾ ಪ್ರವಚನ"ಹಾಗೂ"ನಾಗರೀಲಿಪಿ ಪ್ರಚಾರಾರ್ಥ"

ಪೂಜ್ಯ ವಿನೋಬಾಜಿಯವರ ಆದೇಶದ ಮೇರೆಗೆ ಭೂದಾನ ಗ್ರಾಮದಾನ ಪಾದಯಾತ್ರೆ ಮಾಡಿದ ಶ್ರೀ ಸಿದ್ಧರಾಮ ಗುರೂಜಿಯವರು "ಗೀತಾ ಪ್ರವಚನ" ಹಾಗೂ "ನಾಗರೀ ಲಿಪಿ" ಪ್ರಚಾರ ಪಾದಯಾತ್ರೆಯನ್ನು ಕೈಗೊಂಡಿರುವರು. ವೈಯಕ್ತಿಕ ಸತ್ಯಾಗ್ರಹ ಹಾಗೂ ಚಲೇಜಾವ ಚಳುವಳಿಯಲ್ಲಿ ಇವರು ಭಾಗವಹಿಸಿ ಜೇಲುವಾಸ ಅನುಭವಿಸಿದ್ದಾರೆ.೧೭ನೇ ವಯಸ್ಸಿನಲ್ಲಿ ಮನೆ ತ್ಯಾಗಮಾಡಿ ಸಫಾಯಿ, ಹಿಂದೀ, ಸೇವಾದಲ ಕಾರ್ಯಗಳಲ್ಲಿ ತೊಡಗಿ ಗಾಂಧೀಜಿಯವರ ಮತ್ತು ಬಾಬಾ ಅವರ ಸಾಹಿತ್ಯ ಪ್ರಚಾರ ಮಾಡಿರುವರು.

ಎರಡು ವರುಷಗಳಿಂದ ಅಖಂಡವಾಗಿ ಮಹಾರಾಷ್ಟ್ರ, ಗೋವಾ, ಬಿಜಾಪುರ, ಬೆಳಗಾಂವ, ಕಾರವಾರ, ದ. ಕನ್ನಡ ಉ. ಕನ್ನಡ, ಹಾಸನ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ನಡೆದಿರುವ ಪಾದಯಾತ್ರೆಗೆ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಶ್ರೀ ಕ್ಷೇತ್ರ ಇಂಚಗೇರಿ ಮಠದ ಗುರುಗಳಾದ ಪರಮ ಪೂಜ್ಯ ಮಾಧವಾನಂದಪ್ರಭುಜಿಯವರು (ದೇವರು) ಟ್ಯಾಕ್ಟರು ಹಾಗೂ ಸ್ಪೀಕರ ಸೆಟ್ಟು (ಧ್ವನಿ ವರ್ಧಕ ಯಂತ್ರ) ಪಾದಯಾತ್ರಾ ಅನುಕೂಲಕ್ಕಾಗಿ ಕೊಟ್ಟಿರುವರು.

ಶ್ರೀ ಕ್ಷೇತ್ರ ಇಂಚಗೇರಿ ಮಠದಲ್ಲಿ ಸದ್ಗುರುಗಳು ಪ್ರತ್ಯಕ್ಷ ಆಚರಣೆಯಂಗವಾಗಿ ಗಾಂಧೀಜಿ, ವಿನೋಬಾಜಿಯವರ ತತ್ವಗಳನ್ನು ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಭೋಜನ, ಒಕ್ಕಲುತನ, ಕೈಗಾರಿಕೆಗಳು, ಸಪ್ತಾಹಗಳನ್ನು ನಡೆಸಿ ಸುಮಾರು ಒಂಭತ್ತುಸಾವಿರ ವಿಜಾತಿ ವಿವಾಹಗಳನ್ನು ವರದಕ್ಷಿಣೆ ರಹಿತ, ವೆಚ್ಚವಿಲ್ಲದೆ ಮಾಡಿಸಿರುವರು. ಸ್ವಾತಂತ್ರ ಹೋರಾಟಗಾರರೂ, ಸರ್ವೋದಯ ಮಹಾಪೋಷಕರೂ ಆದ ಶ್ರೀ ಮಾಧವಾನಂದ ಪ್ರಭುಜಿಯವರು ಪಾದಯಾತ್ರೆಗೆ ಅನೇಕ ಕಾರ್ಯಕರ್ತರನ್ನು ಕಳುಹಿಸಿರುವರು.

ಹತ್ತು ವರುಷಗಳಿಂದ ಗ್ರಾಮದಾನ ಪಾದಯಾತ್ರೆ ಮಾಡಿದ ಹಿರಿಯಕಾರ್ಯಕರ್ತರಾದ ಶ್ರೀ ಜಿ. ಜಿ. ಮುರಗೋಡ, ಶ್ರೀ ಗುಲ್ಲಪ್ಪ ಮಹಾರಾಜರು, ಶ್ರೀ ಪ್ರಭು ಬೆನ್ನಾಳಿ ವಕೀಲರು, ಶ್ರೀ ಅರವಿಂದ ಮಗದುಮ ವಕೀಲರು, ಶ್ರೀ ಮಲ್ಲೇಶಪ್ಪ ಕಾಶಾ ಜನಗಿ, ಕುಮಾರಿ ಕುಮುದಿನಿ ಕಾರಾಜನಗಿ, ಜಗನ್ನಾಥ ಮುರಗೋಡ, ವಿವೇಕಾನಂದ ಅರಳಿ, ಸಚ್ಚಿದಾನಂದ ಶಿರಹಟ್ಟಿ ಮಠ ಮುಂತಾದವರು ಪ್ರವಚನ ನೀಡುವರು.

ಸರ್ವಶ್ರೀ ಭಾವೂರಾಯ ಜಾಧವ, ಕಾಡಪ್ಪ ಮುಧೋಳ, ಶ್ರೀಕಾಂತಯ್ಯಾ ಹಿರೇಮಠ, ಮಲ್ಲಿಕಾರ್ಜುನ ಹಿರೇಮಠ, ಹಣಮಂತಪ್ಪ ಮುಗಳಬೋಡ, ಭಾವೂರಾಯಮೇತ್ರಿ ಮುಂತಾದವರು ಸರ್ವೋದಯ ಜಾನಪದ ಗೀತೆಗಳನ್ನು (ಗೀಗೀ) ಪದಗಳನ್ನು ಹಾಡುತ್ತಾರೆ.

ಸ್ವರಾಜ್ಯ ಸುರಾಜ್ಯವಾಗಲು ಪ್ರತಿ ಹಳ್ಳಿ, ಹಳ್ಳಿಗಳಲ್ಲಿ ಗೀತೆಯಂತಹ ಮಹಾನ್‌ಗ್ರಂಥ ಕುರಿತು, ಸರ್ವೋದಯ ವಿಚಾರ ಕುರಿತು, ಗಾಂಧೀ ವಿನೋಬಾ ಸಾಹಿತ್ಯ ಪ್ರಚಾರ, ಖಾದಿ ಪ್ರಚಾರ ಮಾಡುವರು. "ಖಾದಿ ಸ್ವರ್ಗದ ಹಾದಿ" ಸ್ವದೇಶಿ ಬಟ್ಟೆಯಿಂದ ನಿರುದ್ಯೋಗ ನಿವಾರಣೆಯಾಗುವುದು. ಅಲ್ಲದೆ ರಾಷ್ಟ್ರೀಯ ಭಾವೈಕ್ಯತೆಯಾಗಲು ಭಿನ್ನ ಭಿನ್ನ ಭಾಷಿತರಲ್ಲಿಯ

ದುರಭಿಮಾನ ದೂರಾಗಿ ದೇವನಾಗರೀ (ಹಿಂದಿ) ರಾಷ್ಟ್ರಭಾ
ಯಾಗಲು ನಾಗರೀಲಿಪಿ ಪ್ರಚಾರ ಮಾಡುವರು.

ವರಕವಿಗಳೂ, ಸ್ವಾತಂತ್ರ್ಯ ಯೋಧರೂ ಹಾಗೂ ಪಾ
ಯಾತ್ರೆಯಲ್ಲಿ ಹತ್ತು ವರ್ಷ ಸೇವೆ ಸಲ್ಲಿಸಿದ ಹುಲಕುಂದ ಭೀ
ಕವಿಗಳು ರಚಿಸಿದ ಗೀ.ಗೀ ಪದಗಳನ್ನು ಹಾಡುವರು. ಅವರದೇ
ಆದ ಕೆಲವು ಜಾನಪದಗಳನ್ನು ಆಯ್ದು ಇದರಲ್ಲಿ ಕೊಡಲಾಗಿದೆ.
ಜೊತೆಗೆ ಸರ್ವಧರ್ಮ ಪ್ರಾರ್ಥನೆ, ಶಾಂತಿ ಪದ, ಜೈ ಜಗತ್
ಮಂತ್ರದ ಬಗ್ಗೆ ವಿವರಣೆ ಇದೆ. ಹುಲಕುಂದ ಭೀಮಕವಿಗಳಿಗೂ
ಮತ್ತು ಇನ್ನುಳಿದ ಕವಿಗಳವರಿಗೂ ನಮ್ಮ ಪಾದಯಾತ್ರೆ
ಚಿರಋಣಿಯಾಗಿದೆ.

ಪಾದಯಾತ್ರಾ ಮಂಡಲಿ.

ನಮಸ್ಕಾರದ ಪದ

ಕಲಿಯುಗದೊಳಗೆ ಭಕ್ತಿ ಬೆಳೆಸಿದ ಸದ್ಗುರುನಾಥನಿಗೆ
ನಮಸ್ಕಾರ ।
ಅಂಗರಹಿತ ಮಹಾಲಿಂಗನ ಕೂಡಿದ ಗುರುಲಿಂಗ ಜಂಗ
ಮರಿಗೆ ನಮ್ಮ ನಮಸ್ಕಾರ ||ಗೀ.ಗೀ||
ಉಮದಿ ಗ್ರಾಮದೊಳಗೆ ಉದಯವಾದಂಥ ಧಾನ್ಯ
ರಾಜರಿಗೆ ನಮ್ಮ ನಮಸ್ಕಾರ ।
ಭವಿಷ್ಯ ಬಲ್ಲಂಥ ಏನಾಥ ಪ್ರಭುವಿಗೆ ಶಿರಬಾಗಿ
ಮಾಡುವೆ ನಮಸ್ಕಾರ ||ಗೀ||

ಚಾಲ|| ನಮಸ್ಕಾರ ಮಾಡಿರಿ ಸ್ವೀಕಾರ ಕೂಡಿದಂಥ
ಸತ್ಯ ಶರಣರಾ, ಸತ್ಯ ಶರಣರಾ, ||ಗೀ.ಗೀ||
ನಮಸ್ಕಾರದಿಂದ ಲಾಭವಾಗುವದು ತಿಳಿದುಕೊಂಡು
ಮಾಡಿರಿ ನಮಸ್ಕಾರ ||೧||

ಅಂಗರಹಿತ ಮಹಾಲಿಂಗನ ಕೂಡಿದ ಗುರುಲಿಂಗ
ಜಂಗಮರಿಗೆ ನಮಸ್ಕಾರ ।
ಜಮಖಂಡಿ ಗ್ರಾಮದೊಳು ಉದಯವಾದಂತ ಗಿರಿ
ಮಲ್ಲೇಶ್ವರರಿಗೆ ನಮ್ಮ ನಮಸ್ಕಾರ ||
ಗಿರಿಮಲ್ಲೇಶ್ವರ ಸೇವೆ ಸರೆಯಾಗಿ ಮಾಡಿದಂಥಾ

ಸಂಗಮನಾಥನಿಗೆ ನಮ್ಮ ನಮಸ್ಕಾರ ।
ಶಾಂತ ಸಮುದ್ರನಾಕ ಸದ್ಗುರುನಾಥನಿಗೆ ಶಿವ
ಪ್ರಭುಗಳಿಗೆ ನಮ್ಮ ನಮಸ್ಕಾರ
ಶಿವ ಪ್ರಭುಗಳಿಗೆ ಸೇವೆ ಸರಿಯಾಗಿ ಮಾಡಿದಂಥಾ
ಧರ್ಮರಾಜರಿಗೆ ನಮ್ಮ ನಮಸ್ಕಾರ ||೨||

ಚಾಲ॥ ಬರಬೇಕ್ರಿ ಇಂಚಗೇರಿ ಮಠಕ್ಕೆ ಎಲ್ಲಾರು ಅಲ್ಲಿ

ಇರತಾರ ಮಾಧವಾನಂದರಾ, ಮಾಧವಾನಂದರ!

ಅವರಿಗೆ ಮಾಡಿರಿ ನಮಸ್ಕಾರಾ ।

ನರಜನ್ಮ ಆಗುದು ಉದ್ಧಾರಾ 1 ಗೀ ಗೀ

ಸಾಧು ಸಂತರ ಸಾಕ್ಷಿಯಾಗಿ ಖೊಜಾನಟ್ಟಿ

ಮುತ್ತಪ್ಪ ಹಿಂಗಕವಿ ಮಾಡಿ ಹೇಳತಾರ ।

ಅಂಗರಹಿತ ಮಹಾಲಿಂಗನ ಕೂಡಿದ ಗುರುಲಿಂಗ

ಜಂಗಮರಿಗೆ ನಮ್ಮ ನಮಸ್ಕಾರ ॥ಗೀ ಗೀ॥

॥ಜಯ ಮಾಧವಾ॥

ಓಂ ದೇವರು

ಓಂ  ಓಂ

"ದೀನ ದೇವೋ ಭವ ಎಂಬ ದೇವರು ದಯೆಯ ಆಗರವಾಗಿದ್ದಾರೆ." ಸದಾ ಕಾರ್ಯ ತತ್ಪರರು

ಶ್ರೀ ಮಾಧವಾನಂದ ಪ್ರಭೂಜಿಯವರು.

"Very happy is he and blessed is he whose life is a continues sacrifice."

ಆಡು ಮುಟ್ಟದ ಗಿಡವಿಲ್ಲ; ಸರ್ವಜ್ಞನು ಹೇಳದ ಮಾತಿಲ್ಲ

ದೇವರು ತಕ್ಕೊಳ್ಳದ ಸೇವಾ ಕಾರ್ಯವಿಲ್ಲ.

೭ನೇ ವಯಸ್ಸಿನಲ್ಲಿ ಮನೆ ತ್ಯಜಿಸಿದರು.

ಯಾರೇ ಸಂದರ್ಶಿಸಲಿ ಅವರ ಕ್ಷುದ್ರತೆಯು, ಅಚೇತನವು ಮಾಯವಾಗುವುದು. ಆನಂದ ಹೊರಹೊಮ್ಮುವುದು. ಸರ್ವದಾ ಹಾಸ್ಯ ಮಾಡುತ್ತಿದ್ದ ಅವರ ಮಂದಹಾಸವು ಸುತ್ತಲೆಲ್ಲಾ ಬೆಳಕು ಬೀರುವಂತೆ ಮಾಡುತ್ತದೆ.

ಶಾಲೆಗೆ ಹೋಗಲು ಒತ್ತಾಯಿಸಿದಾಗ ಹೊಟ್ಟೆ ಹೊರೆಯುವ ವಿದ್ಯೆ ಬೇಡವೆಂದು ಹೇಳುತ್ತಾ ತಾವೇ ಸ್ಮಶಾನಕ್ಕೆ ಹೋಗಿ ಧ್ಯಾನ ಮಗ್ನರಾಗುತ್ತಿದ್ದರಂತೆ. ೩-೪ದಿನ ಹಾಗೆಯೇ ಕುಳಿತಿರುತ್ತಿದ್ದರು. ಹೀಗಿರುವಾಗ್ಗೆ ಸರ್ಪ ಇವರ ಮೇಲೆ ಹೆಡೆ ತೆಗೆದು ಆಡುವುದನ್ನು ನೋಡಿರುವರು.

ನಿಷ್ಠಾವಂತ ಭಗವದ್ಭಕ್ತರಾದ ಶ್ರೀ ಶಿವಪ್ರಭುಗಳು ಹಾಗೂ ಕಾಳಮ್ಮ ತಾಯಿಯವರ ಉದರದಲ್ಲಿ ಹುಬ್ಬಳ್ಳಿಯಲ್ಲಿ ಜನಿಸಿದರು. ಅವರು ಶ್ರೀಗಿರಿಮಲ್ಲೇಶ್ವರ ರವರಿಂದ ಅನುಗ್ರಹಿತರಾದರು ರೋಗಿ ಬಯಸಿದ್ದೂ ವೈದ್ಯ ಹೇಳಿದ್ದೂ ಒಂದೇ ಎಂಬಂತೆ ಮಹಾದೇವರು ಉಪದೇಶ ಪಡೆದು ಸದಾ ಧ್ಯಾನಮಗ್ನರಾಗಿರುತ್ತಿದ್ದರು. ಏಳನೇ ವಯಸ್ಸಿನಲ್ಲಿಯೇ ಮನೆಯನ್ನು ಬಿಟ್ಟರು. ವಿವಾಹವಾಗಲು ಕೇಳಿದಾಗ್ಗೆ ನಿರಾಕರಿಸಿ ಬಾಲಬ್ರಹ್ಮಚಾರಿಗಳಾಗಿ ಆತ್ಮಜ್ಞಾನ ಮಾಡಿಕೊಂಡು ಗಾಂಧೀಜಿಯವರ ಕರೆಯ ಮೇರೆಗೆ ವೈಯಕ್ತಿಕ ಸತ್ಯಾಗ್ರಹ, ಚಲೇಜಾವ ಚಳವಳಿಯಲ್ಲಿ ಬ್ರಿಟಿಶರ ವಿರುದ್ಧ ಸಾವಿರಾರು ಜನ ಅನುಯಾಯಿಗಳೊಂದಿಗೆ ಜೇಲುವಾಸ ಅನುಭವಿಸಿದ್ದಾರೆ. ಸ್ವಾತಂತ್ರ್ಯ ನಂತರ ಸಂಸ್ಥಾನ ವಿಲೀನೀಕರಣ, ಗೋವಾ, ಹೈದರಾಬಾದ, ಜತ್, ಜಮಖಂಡಿ ಮುಂತಾದ ಅನೇಕ ಸಂಸ್ಥಾನಗಳಲ್ಲಿ ಅಹಿಂಸಾತ್ಮಕ ಹೋರಾಟವನ್ನು ನೂರಾರುಜನರೊಂದಿಗೆ ಹೋರಾಡಿ, ಸಾಕಷ್ಟು ಕಷ್ಟ ಅನುಭವಿಸಿರುವರು. ಅಖಂಡ ಕರ್ನಾಟಕ ರಾಜ್ಯ ನಿರ್ಮಾಣಕ್ಕಾಗಿ ಉಪವಾಸ ಮಾಡಿದರು. ರೈತ ಕೂಲಿಕಾರ ಸಲುವಾಗಿ, ಭೂ ಸುಧಾರಣೆ ಕಾನೂನು ಬರಲು, ಬಳ್ಳಾರಿ ಆಂಧ್ರರಿಗೆ ಕೊಟ್ಟಾಗ ಕರ್ನಾಟಕಕ್ಕೆ ಕೊಡಲು ಚಳವಳಿ ನಡೆಸಿದರು. ಮತ್ತೆ ಜೈಲು, ಬಿಡುಗಡೆ ಹೀಗೆ ಜನಸೇವೆಗಾಗಿ ೨೭ಸಾರಿ ಜೇಲುವಾಸ ಬಂದರೂ ಒಂದು ದಿನ ಶಿಕ್ಷೆ ಒಂದು ಪೈಸಾದಂಡ ಆಗಿಲ್ಲ. ಯಾರು ಜನತಾ ಜನಾರ್ಧನನ ಸೇವೆಯಲ್ಲಿ ಧುಮುಕುವರೋ ಅವರು ಅಮೃತಪಾನ ಮಾಡಿ ಅಮರರಾಗುವರು ಎಂಬುದು ಇವರ ಮಂತ್ರ.

ಆರತಿ ಪದ

ಆರತಿ ಗಿರಿರಾಜ ನೀನೆ ಸ್ವಯಂ ಪ್ರಕಾಶ
ವ್ಯಾಪಿಸಿ ಜಗವೆಲ್ಲ ||ಪ||

ಕಾಲಕಾಂತೆ ಅವತಾರ ಧರಿಸಿ ಕಾಡಸಿದ್ಧನಾಗಿ
ಬಂದಿ| ಅದ್ವೈತ ಜ್ಞಾನ ಬೋಧಿಸಿ
ಗುರುಲಿಂಗಜಂಗಮನಾಗಿ ||೧||

ವೇದಾಂತ ರಹಸ್ಯವನು ಅನುಭವಿಸಿ
ಭಾವಪೂರಾಜನಾಗಿ ಮೆರದಿ|
ಶ್ರೀ ಗುರು ಶಿವ ಪ್ರಭು ||೨||

ಮಾಧವಾನಂದ ವಿಶ್ವಮೂರ್ತಿ ಜಗ
ದೊಳಗೆ ನಿನ್ನ ಕೀರ್ತಿ ಬಗೆ ಬಗೆ ರೂಪ
ತೋರುತ್ತಿ ನಿಮ್ಮ ಭಕ್ತರಿಗಿಲ್ಲ ಭೀತಿ ||೩||

ಮಂತ್ರ

ಈಶನಾವಾಸವೀ ಜಗದೊಳಿಹುದೆಲ್ಲವೂ
ಈಶನಿಗೆ ಮೀಸಲಾಗಿಹುದೆಲ್ಲವೂ ।
ಆಶಿಸದೆ ಏನನೂ ಆತನಿತ್ತುದನುಂಡು ॥
ವಾಸಿಸೈ ನೀನು ಸಂತಸದಿಂದಲಿ ॥

ಸರ್ವ ಧರ್ಮ ಸ್ಮರಣ

ಓಂ ತತ್ಸತ್ ಶ್ರೀನಾರಾಯಣ ನೀ ಪುರುಷೋತ್ತಮ ಗುರು ನೀ
ಸಿದ್ಧ ಬುದ್ಧ ನೀ ಸ್ಕಂದ ವಿನಾಯಕ ಸವಿತಾ ಪಾವಕ ನೀ ॥೧॥
ಬ್ರಹ್ಮ ಮಜ್ದ ನೀ, ಯವ್ಹ ಶಕ್ತಿ ನೀ ಏಸುಪಿತಾ ಪ್ರಭು ನೀ
ರುದ್ರ ವಿಷ್ಣು ನೀ, ರಾಮ ಕೃಷ್ಣ ನೀ ರಹೀಮ ನೀ ತಾವೋ ನೀ ॥೨॥
ವಾಸುದೇವ ಗೋ-ವಿಶ್ವರೂಪ ನೀ ಚಿದಾನಂದ ಹರಿ ನೀ
ಅದ್ವಿತೀಯ ನೀ, ಅಕಾಲ ನಿರ್ಭಯ ಆತ್ಮಲಿಂಗ ಶಿವ ನೀ ॥೩॥

ಹನ್ನೊಂದು ವ್ರತಗಳು

ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹ ॥
ಶರೀರಶ್ರಮ ಅಸ್ವಾದ ಸರ್ವತ್ರ ಭಯವರ್ಜನ ॥೧॥
ಸರ್ವ-ಧರ್ಮ ಸಮಾನತ್ವ ಸ್ವದೇಶಿ ಸ್ಪರ್ಶ ಭಾವನಾ ॥
ಹನ್ನೊಂದೀವ್ರತ ಕೈಕೊಳ್ವ ನಮ್ರ ನಿಶ್ಚಯ-ಭಾವದಿ ॥೨॥

ಶಾಂತಿ ಮಂತ್ರ

ಸಕಲರೂ ಸುಖವಾಗಿ ಬಾಳಲಿ । ಸಕಲ ಸಂಕಟ ನೀಗಲಿ

ಸಕಲರಿಗೂ ಕಲ್ಯಾಣವಾಗಲಿ । ಸಕಲ ದುಃಖವೂ ಸರಿಯಲಿ ॥
॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

೨ ಮುಂದಕೆ ಮುಂದಕೆ ಸಾಗೋಣ

ಮುಂದಕೆ ಮುಂದಕೆ ಸಾಗೋಣ ।
ಜೈ ಜಗತ್ ಘೋಷಣೆ ಮಾಡೋಣ
ಗ್ರಾಮ ಸ್ವರಾಜ್ಯವ ಕಟ್ಟೋಣ
ಜೈ ಗಾಂಧಿಯ ಪ್ರೇಮದಿ ಹಾಡೋಣ

(೧ನೇ ಸಾಲಿನವರು)		(೨ನೇ ಸಾಲಿನವರು)
ಬಂದರೆ ಬರಲಿ	....	ಬಂದರೆ ಬರಲಿ
ಕಷ್ಟ ಪರಂಪರೆ	....	ಬಂದರೆ ಬರಲಿ
ಸಾವಿರ ಸಂಕಟ	....	ಬಂದರೆ ಬರಲಿ
ಸಾವೂ ನೋವೂ	....	ಬಂದರೆ ಬರಲಿ
ಧನವ ವಿನಾಶಾ	....	ಬಂದರೆ ಬರಲಿ
ತನುಗಾಯಾಸಾ	....	ಬಂದರೆ ಬರಲಿ

(ಎಲ್ಲರೂ) ಮುಂದಕೆ ಮುಂದಕೆ ಸಾಗೋಣ ।
ಜೈ ಜಗತ್ ಘೋಷಣೆ ಮಾಡೋಣ ॥

ಅದು ಒಂದಿರಲಿ	....	ಅದು ಒಂದಿರಲಿ
ದೇವರ ಸ್ಮರಣೆ	....	ಅದು ಒಂದಿರಲಿ
ಧರ್ಮದ ಪ್ರೇಮ	....	ಅದು ಒಂದಿರಲಿ
ನೀತಿಯ ನೇಮ	....	ಅದು ಒಂದಿರಲಿ

ದೇಶದ ಭಕ್ತಿ	....	ಅದು ಒಂದಿರಲಿ
ಆತ್ಮದ ಭಕ್ತಿ	....	ಅದು ಒಂದಿರಲಿ

(ಎಲ್ಲರೂ) ಮುಂದಕೆ ಮುಂದಕೆ ಸಾಗೋಣ
ಜೈ ಜಗತ್ ಘೋಷಣೆ ಮಾಡೋಣ ॥

ದೂರಕೆ ಸರಿಸಿ	....	ದೂರಕೆ ಸರಿಸಿ
ದುಷ್ಟ ಚಟಗಳ	....	ದೂರಕೆ ಸರಿಸಿ
ಕೆಟ್ಟ ರೂಢಿಗಳ	....	ದೂರಕೆ ಸರಿಸಿ
ವಿಲಾಸ ವೃತ್ತಿಯ	....	ದೂರಕೆ ಸರಿಸಿ
ಅಂಧ ಶ್ರದ್ಧೆಯ	....	ದೂರಕೆ ಸರಿಸಿ
ಉಚ್ಚ ನೀಚತೆಯ	....	ದೂರಕೆ ಸರಿಸಿ
ದುರ್ಬಲ ವೃತ್ತಿಯ	....	ದೂರಕೆ ಸರಿಸಿ
ದ್ವೇಷ ಮಂತರ	....	ದೂರಕೆ ಸರಿಸಿ
ನಿರಾಶ ಭಾವನೆ	....	ದೂರಕೆ ಸರಿಸಿ

(ಎಲ್ಲರೂ) ಮುಂದಕೆ ಮುಂದಕೆ ಸಾಗೋಣ
ಜೈ ಜಗತ್ ಘೋಷಣೆ ಮಾಡೋಣ ॥

ಸಾಧಿಸುವಾ	....	ಸಾಧಿಸುವಾ
ಸದ್ವಿಚಾರಗಳ	....	ಸಾಧಿಸುವಾ
ಸ್ನೇಹ ಸ್ವಭಾವ	....	ಸಾಧಿಸುವಾ
ಸತ್ಯದ ನಿಷ್ಠೆ	....	ಸಾಧಿಸುವಾ
ಯಜ್ಞದ ಬುದ್ಧಿ	....	ಸಾಧಿಸುವಾ

(ಎಲ್ಲರೂ) ಮುಂದಕೆ ಮುಂದಕೆ ಸಾಗೋಣ
ಜೈ ಜಗತ್ ಘೋಷಣೆ ಮಾಡೋಣ ॥

ಜೈ ಜೈಕಾರ .... ಜೈ ಜೈಕಾರ
ಸ್ವರಾಜ್ಯ ಘೋಷಣೆಗೆ .... ಜೈ ಜೈಕಾರ
ರಚನಾ ಕಾರ್ಯಗಳಿಗೆ .... ಜೈ ಜೈಕಾರ
ಸಾಮ್ಯ ಸಾರಕೆ .... ಜೈ ಜೈಕಾರ
ಸೋದರ ಪ್ರೇಮಕೆ .... ಜೈ ಜೈಕಾರ
ಸಮತಾ ಭಾವಕೆ .... ಜೈ ಜೈಕಾರ
ಸತ್ಯದ ಸಮರಕೆ .... ಜೈ ಜೈಕಾರ
ಶಾಂತಿಯ ಸಮರಕೆ .... ಜೈ ಜೈಕಾರ
ನೀತಿಯ ರೀತಿಗೆ .... ಜೈ ಜೈಕಾರ
ಗ್ರಾಮದಾನ ಯಜ್ಞಕೆ .... ಜೈ ಜೈಕಾರ

(ಎಲ್ಲರೂ) ಮುಂದಕೆ ಮುಂದಕೆ ಸಾಗೋಣ.
ಜೈಜಗತ್ ಘೋಷಣೆ ಮಾಡೋಣ ||

೩. ಏಳು ರೈತ ಬಾಂಧವಾ.

ಏಳು ರೈತ ಬಾಂಧವಾ | ಕೀಳು ದಾಸ್ಯ ನಾಶವಾ |
ಕೀಳು ದಾಸ್ಯ ಮೂಲವಾ | ನೀನಾಳು ನಿನ್ನ ರಾಜ್ಯವಾ ||೧||

ಮರೆಯೋಣ ಜಾತಿ-ಪಾತಿಯಾ | ಮೆರೆಸೋಣ ಧರ್ಮನೀತಿಯಾ |
ಧರಿಸು ಬುದ್ಧ ವಾದಿಯಾ | ನೀನಾಳು ನಿನ್ನ ರಾಜ್ಯವ ||೨||

ಕಡಿದು ಭೇದಭಾವವ | ತೊರೆದು ದುಷ್ಟ ವ್ಯಸನವ |
ಪಡೆದು ಸಾಮ್ಯಯೋಗವ | ನೀನಾಳು ನಿನ್ನ ರಾಜ್ಯವ ||೩||

ಇಲ್ಲದಿದ್ದ ಜನರಿಗೆ ಉಳ್ಳ | ಜನರು ನೀಡುತ |
ಎಲ್ಲ ಜನರು ಸುಖಿಸಲು | ನೀನಾಳು ನಿನ್ನ ರಾಜ್ಯವ ||೪||

ಭೂಮಿ ಉಳುವವನದು | ಭೂಮಿ [illegible] |
ಭೂಮಿ [illegible] | ನೀನಾಳು ನಿನ್ನ ರಾಜ್ಯವ ||೫||

[illegible] ಅಳಿಸು | ದೇಶವೆಲ್ಲ ಅಳಿಸು
ನೀನೆ ಅನ್ನದಾತನು | ನೀನಾಳು ನಿನ್ನ ರಾಜ್ಯವ ||೬||

ಗ್ರಾಮದಾನದಿಂದ [illegible] | ಪ್ರೇಮ ಸಮತೆ ಸಾಧಿಸಿ |
ಗ್ರಾಮ ಸ್ವರಾಜ್ಯವಾಳು | ನೀನಾಳು ನಿನ್ನ ರಾಜ್ಯವ ||೭||

ಹೆಂಡತಿ ಇದ್ದರೆ ಎಂಥಾಕೆ ಇರಬೇಕು

ಹೆಂಡತಿ ಇದ್ದರೆ ಎಂಥಾಕೆ ಇರಬೇಕು | [illegible]
ಹೆಂಡತಿ ಇದ್ದರೆ ಎಂಥಾಕೆ ಇರಬೇಕು | [illegible] ||೧||

ಗಂಡನ ಸ್ವಭಾವ ತಿಳಿಯಬೇಕು |
ತಿಳಿದು ಅದರಂತೆ ನಡೆಯಬೇಕು |
ಜಗಳಿರಲು ನಗೆ ಮುಖವಿರಬೇಕು |
ಜಗಳಾಡದು ತಗ್ಗಿ ಕೇಳಬೇಕು ||೨||

ಗಂಡ ಊರಾಗ ಇಲ್ಲದ ಕಾಲಕ್ಕೆ | ನೆರೆಮನೆಗೆ ಹೋಗ
ಹೊತ್ತು ಗಳೆಯದ ಮನೆ-ಇರಬೇಕು | ನೆರೆಮನೆಗೆ ಹೋಗ
ಕೊಂಕು ಬರಲಿ ಹಿರಿಯರು ಬರಲಿ | ಸದಾ ನಮ್ಮದೆ [illegible]
ಮರ್ಯಾದಿ ಕಾಯ್ದ್ಕೊಂಡು |
ತವರು ಮನೆಯ ಕೀರ್ತಿ ತರಲುಬೇಕು ||೩||

ಹೇಳಿದ ಕಾರ್ಯ ಕೇಳೂದ ಬಿಡಬೇಕ | ನಾಳಿನ ಕೆಲಸ
ನಾಳೆಗೆ ಸರಿಯಾಗಿ ಮಾಡುತಿರಬೇಕು | ನಾಳಿನ ಕೆಲಸ
ಕೇಡಾಗೋದು ಮಾಡಬಾರದು ಸುಳ್ಳುಸುಳ್ಳು ಹೇಳಬಾರದು

ಒಳ್ಳೆಯವರ ಗೆಳೆತನ ಮಾಡಿ । ಹಳ್ಳೀನಡತಿ-ಬಿಟ್ಟಿರಬಾರದು ||೩||
ಬಾಯಿಃಸವಿ ತಿನ್ನುವಂಥಾಕಿ । ಮಯೋರ್ ಬ್ಯಾಡ
ಹಾಯ್ಸ್ ಅಂತ-ಜಗಳಾ ಮಾಡಾಕಿ । ಮಯೋರ್ ಬ್ಯಾಡ
ಪತಿಯ ಪ್ರೀತಿಗೆ ಪಾತ್ರಳಾಗಿ । ಹಿತದಿ ಮಾತನಾಡುವಳಾಗಿ

ಅತಿಥಿಗಳ ಸತ್ಕರಿಸುವಳಾಗಿ ಸತತ
ನೀತಿಯಿಂದ ನಡೆಯುವಳಾಗಿ ||೪||
ಮಕ್ಕಳ ಮೇಲೆ ಪ್ರೇಮ ವಿದ್ದಾಕಿ । ಅಕ್ಕರತೆಯಿಂದ
ಸಾಕಿ ಸಲುಹಿ ಜೋಕಿ ಮಾಡಾಕಿ । ಅಕ್ಕರತೆಯಿಂದ
ಸೊಕ್ಕು ಪುಕ್ಕುತನವ ಬಿಟ್ಟು । ಏಕೋಭಾವದಿಂದ ನಡೆದರ
ಲೋಕ ಸೇವಕ ಹುಲುಕುಂದ ಭೀಮ ।
ಠೀಕ ಅಂದ ಸಂಸಾರ ನಿವಳ ||೫||



೫ ಸಾಮ್ಯ ಕೂಗು

ಕುಣಿರ್‍ಯ ಕುಣಿರೋ ಕರ್ಮಭೂಮಿಲಿ
ದನಿ ಎತ್ತಿ ಹೇಳಿ ಸಾಮ್ಯ ಗಾನವಾ ||ಪ||
ದುಡಿಸಿಕೊಳ್ಳೋ ಕಾಲ ಹೋಯ್ತು
ಮಾಡಿಸಿಕೊಳ್ಳೋ ಕಾಲ ಹೋಯ್ತು
ಮಾಡ್ವಕಾಲ ಬಂತೋ ಅಣ್ಣಯ್ಯಾ-ಮಾಡ್ವ ||೧||
ರಾಜರೆಲ್ಲಾ ಹೋಗಿ ಈಗ ।
ಪ್ರಜಾರಾಜ್ಯ ನಡಿಯುವಾಗ ।
ರಾಜನೆಂಬೋ ಒಡೆಯನಾರಯ್ಯಾ, ರಾಜನೆಂಬೋ ||೨||

ನಮ್ಮ ಪ್ರಧಾನಿಗೊಂದೇ ಓಟು ।
ನಮ್ಮ ಜನಕೆ ಒಂದೇ ಓಟು ।
ನಮ್ಮ ಭೇದ ಮರೆಯಿರಣ್ಣಯ್ಯಾ, ನಮ್ಮ ಭೇದ ||೩||

ರಾಜಕೀಯ ಸಮತೆ ಬಂತು ।
ಪ್ರಜಾತಂತ್ರ ರಾಜ್ಯ ಬಂತು ।
ಸ್ವಜನರೆಂಬೋ ಭಾವ ಬರಲಿಲ್ಲೋ. ಸ್ವಜನ.... ||೪||

ದುಡಿಯುವ ನಮ್ಮ ಜನರಿಗೆಲ್ಲ
ಮಾಡಿ ಉಣ್ಣೋ ಸಾಧನೆ ಎಲ್ಲ ।
ಕ್ಕೊಸ್ರೆಂಬ ಕೂಗು ಹಬ್ಬಿತೋ. ಕೊಡ್ಸಿ.... ||೫||

ನಮ್ಮ ಗ್ರಾಮ ನಮ್ಮ ಜನ ।
ನಮ್ಮ ಭೂಮಿ ನಮ್ಮ ಧನ ।
ತಿಮ್ಮ ಸಿದ್ದರೆಲ್ಲ ಒಂದೆಯೋ, ತಿಮ್ಮ ಸಿದ್ದ... ||೬||

ಭೂಮಿ ಹಂಚಿ ಬಾಳಬೇಕು ।
ನಮ್ಮ ಜಗಳ ಮರೆಯಬೇಕು ।
ನಮ್ಮ ಲೋಭ ಒಳ್ಳೇಯದಲ್ಲಯ್ಯಾ. ನಮ್ಮ... ||೭||

ಜ್ಞಾನ ಶಕ್ತಿ, ಸಂಪತ್ತೆಲ್ಲ ।
ನನ್ನದೆಂದೆ, ಭಾಗ್ಯವಲ್ಲ ।
ನಮ್ಮ ಜನರ ಭಾಗ್ಯ ಕಾಣಯ್ಯ. ನಮ್ಮ.... ||೮||

ನನ್ನ ಶುದ್ಧಿ ಜೀವದೇಳ್ಗೆ ।
ನಮ್ಮ ಸಮಾಜದಿಂದ ಕಾಣಯ್ಯ, ನಮ್ಮ ||೯||

ಅವರ ಋಣವ ಹರಿಸಬೇಕು
ಉದರಭರಣ ಸಾಗಬೇಕು ।
ಹೃದಯ ಶುದ್ಧಿಯಾಗಬೇಕಯ್ಯಾ, ಹೃದಯ.... ||೧೦||

ನಮ್ಮ ತೊಡಕು ನಾವೆ ಹರಿಸೆ ।
ನಮ್ಮ ಶಕ್ತಿಯಿಂದ ಬಿಡಿಸೆ ।
ನಮ್ಮ ಗ್ರಾಮರಾಜ್ಯ ನೋಡಯ್ಯಾ, ನಮ್ಮ ||೧೧||

ಯಾರ ಸತ್ತೆ ಯಾಕೆ ಬೇಕು?
ಯಾರ ಭತ್ತೆ ನಮ್ಗೆ ಬೇಕು?
ನೇರವಾಗಿ ಬಾಳಿರಣ್ಣಯ್ಯಾ ನೇರವಾಗಿ ||೧೨||

ನಾವೇ ರಾಜರಾಬೇಕು ।
ನಾವೇ ದುಡಿಮೆ ಗೈಯಬೇಕು ।
ನಾವೇ ಶಿಸ್ತು ಕಲಿಯಬೇಕಯ್ಯಾ, ನಾವೇ.... ||೧೩||

ಅಂದು ನಮ್ಮ ಗ್ರಾಮೋದಯ ।
ಅಂದು ನಮ್ಮ ರಾಜ್ಯೋದಯ ।
ಅಂದು ನಮ್ಮ ಗ್ರಾಮರಾಜ್ಯವಯ್ಯಾ, ಅಂದು.... ||೧೪||

೬ ಶರೆ-ಬಾಟ್ಲೆವ್ವ

ಏನಮಜಾಮಾಡಿದಿ ಶೆರೆ ಬಾಟ್ಲೆವ್ವಾ । ಬಾಳ್ವೆಯಲ್ಲಾ
ಮಾಡಿದಿ ಮೂರಾ ಬಟ್ಟೆವ್ವಾ । ||ಪ||

ಮುದ್ದಿಮಾಳಹಳದಾಗ ನಿನ್ನ ಮೆಟ್ಟವ್ವಾ । ಸದ್ದಿ ಕೋಲಗಡಿಗ್ಯಾಗ
ನಿನ್ನ ಆಟವ್ವಾ । ದುಡ್ಡಿದವರಿಗೆ ಕೈ ಕೊಟ್ಟೆವ್ವಾ ||೧||

ಹೊಟ್ಟೆಯೊಳಗ ಹೊಕ್ಕಳಕರಳಸುಟ್ಟೆವಾ । ಗಳಿಸಿದ ಗಂಟೆಲ್ಲ
ಸೆಳದ ಬಿಟ್ಟೆವ್ವಾ ಹೊಲಮನಿಗೆ ಅಳಿಗಾಲಶಂದ ಇಟ್ಟೆವ್ವಾ ||೨||

ನವಸಾಗರಿಕೆ ನಿನಗೆ ಒಳ್ಳೇಗಂಟವ್ವಾ । ನಿನ್ನ ಕುಡದವರಾದ್ರ
ಹುಳಕದಂಟವ್ವಾ । ಮಹಾತ್ಮಾಗಾಂಧಿ ಮುರಿಯಂದ ನಿನ್ನ
ಸೊಂಟವ್ವಾ ||೩||

ಕಾಳಿಲ್ಲ ಮನಿಯಾಗ ಕೈ ಕಟ್ಟವ್ವಾ । ಹೆಂಡರ ಮಕ್ಕಳಿಗೆ ಬಂತ
ಬಾಳಕಷ್ಟವ್ವಾ । ಮಂಗಳಸೂತ್ರ ಸಹಿತ ಮಾರಿಸಿ ಬಿಟ್ಟೆವ್ವಾ ||೪||

ಗುರುಭೀಮೇಶ ಆದ ಬಾಳಸಿಟ್ಟವ್ವಾ । ಬೇಗಹೋಗ ಇನ್ನ ಊರ
ಬಿಟ್ಟೆವ್ವಾ ನಬಿಯವರ ಪದ ಹಸನಕಟ್ಟೆವ್ವಾ ||೫||



೭ ಮಹಾತ್ಮ ಗಾಂಧೀಜಿ

ಮೊದಲಿಗೆ ಸ್ಮರಿಸುವೆ ಗುರು ಗಾಂಧಿ ।
ಬಂದು ಕಾಯೊ ಕಂದನ ಮರ್ಯಾದಿ ||ಪ||

ರೈತರಿಗೆ ಹರಿಜನರಿಗೆ ಒಲಿದಿ ।
ಮಾತು ಮಾತಿಗೆ ಅಂತಾರ ಮಹಾತ್ಮಗಾಂಧಿ ||೧||

ಸತ್ಯವೇ ದೇವರೆಂದು ತಿಳಿದಿ ।
ನಿತ್ಯದಲ್ಲಿ ಪ್ರಾರ್ಥನೆ ನಡೆಸಿದಿ । ||೨||

ಸತ್ಯಾಗ್ರಹ ತತ್ವವ ಬೋಧಿಸಿದಿ ।
ಜಾತ್ಯಾತೀತ ರಾಷ್ಟ್ರಕ್ಕಾಗಿ ದುಡಿದಿ ॥ ॥೩॥

ಭಂಗಿ ಕೆಲಸ ಹ್ಯಾಂಗ ನೀನು ಮಾಡಿದಿ ।
ಮಂಗಳಾಂಗ ಹುಲಕುಂದ ಭೀಮೇಶಗೊಲಿದೀ ॥೪॥




೮ ಮಕ್ಕಳಿಗೆ

ಚಿಕ್ಕ ಮಕ್ಕಳೆ ಕೇಳಿರಿ ಈ ಮಾತಾ ।
ಅಕ್ಕರದಿಂದ ಹೇಳುವೆ ನಾ ಸ್ವಂತಾ ।
ಬೆಳಗಿನಲ್ಲಿ ಬೇಗನೆ ಏಳುತ ।
ಜಳಕ ಮಾಡಿ ಮಡಿಬಟ್ಟೆ ಧರಿಸುತ ।
ಕುಳಿತು ತಾಯಿತಂದೆಗೆ ನಮಸ್ಕರಿಸುತ ।

ಸ್ಕೂಲಿಗೆ ಬಂದು ಅಧ್ಯಾಪಕರಿಗೆ ವಂದಿಸುತಾ ।
ಹೇಳ್ರಿ ಜೈ ಜಗತ್ ॥೧॥
ಸುಳ್ಳು ಮಾತನಾಡಬಾರದು ವ್ಯರ್ಥ । ಕಳ್ಳತನ ಕಲಿತರೆ ಅನರ್ಥ
ಒಳ್ಳೆ ಜಾಣತನ ಕಲಿಯಿರಿ ತುರ್ತ । ನಾಳೆ ದೇಶದೊಳಾಗುವಿರಿ
ಪ್ರಖ್ಯಾತ ಹೇಳ್ರಿ ಜೈ ಜಗತ್ ॥೨॥
ತಿಳುವಳಿಕೆ ಸ್ವಭಾವ ಇರಬೇಕು ಶಾಂತ ।
ಕಳಕಳಿಯಿಂದ ಬಡವರನ್ನು ನೋಡುತ
ತಳಮಳಿಸಿ ದಾನಧರ್ಮ ಮಾಡುತ ।
ಇಳೆಯೊಳಗೆ ಕೀರ್ತಿಯನ್ನು ಗಳಿಸುತ ಹೇಳ್ರಿ ಜೈ ಜಗತ್ ॥೩॥

ಶಾಲೆ ತಪ್ಪಿಸಬಾರದು ನೋಡಬೇಕಂತ ।
ಖಾಲಿ ತಿರುಗಬಾರ್ದು ವ್ಯಾಳೆಗಳೆಯುತ ।
ಚಲೋ ಅಭ್ಯಾಸಮಾಡಿ ಕಲಿಯಬೇಕ ಶಿಸ್ತ ।
ಹುಲುಕುಂದ ಭೀಮ ಹೇಳಿದ ಈ ಕವಿತಾ ।
ಹೇಳ್ರಿ ಜೈ ಜಗತ್ ॥೪॥



೯ ಅಧ್ಯಾತ್ಮದಲ್ಲಿ ಭಾರತದೇಶ ಮುಂದ

ದುಡಿಮೆಯೊಳಗೆ ಜರ್ಮನಿ ಮುಂದ ।
ಆರ್ಥಿಕದಲ್ಲಿ ಅಮೇರಿಕ ಮುಂದ ।
ಜಾಣಾಕ್ಷತನಕೆ ಬ್ರಿಟೀಶ ಮುಂದ ।
ಹಿಂದೂಸ್ತಾನ ಇಲ್ರಿ ಹಿಂದ ।
ಹಡೆಯುವದರಲ್ಲಿ ಆಗೇತಿ ಬಾಳಮುಂದ ।೧।

ಸಾಮ್ಯವಾದ ರಶಿಯ ಮುಂದ ।
ಕೈಗಾರಿಕೆಗೆ ಜಪಾನ ಮುಂದ ।
ಈಜಿಪ್ತದ ಹತ್ತಿ ಮುಂದ ।
ಇರಾಕ ಎಣ್ಣೆ ಖಣಿ ಮುಂದ ।
ಅಧ್ಯಾತ್ಮದಲ್ಲಿ ಭಾರತದೇಶ ಮುಂದ ।೨।

ಮೋಟಾರದೊಳಗ ಡ್ರೈವ್ಹರ ಮುಂದ ।
ಡ್ರೈವ್ಹರ ದಾಟ ಇಂಜಿನ ಮುಂದ

ಇಂಜಿನಕ್ಕಿಂತ ವೇಗ ಮುಂದ 1
ವೇಗಕ್ಕಿಂತ ಗಾಳಿ ಮುಂದ
ಗಾಳಿಕ್ಕಿಂತ ಮನುಷ್ಯನ ಮನಸ್ಸು ಮುಂದ ।೩।

ಮನಸಗೊಟ್ಟ ಕೇಳುವರ ಮುಂದ 1
ಹಾಡುವರ ಬೇಕ ಅವರ ಮುಂದ 1
ಕೇಳುವರ ಕಿವಿ ಮುಂದ 1
ರಾಷ್ಟ್ರೀಪದಾ ಅದು ಮುಂದ ಪದ ಮಾಡುವ 1
ಹಲುಕುಂದ ಭೀಮೇಶ ಮುಂದ ।೪।



ಸ್ತೋತ್ರ

ಚೈತನ್ಯ ಮೂರ್ತಿಯು ನೀನೆ
ಆತ್ಮ ಶಕ್ತಿಯು ನೀನೆ
ಪೃಥ್ವಿಪಾಲಕ ನೀನೆ
ಮುಕ್ತಿದಾಯಕ ನೀನೆ
ಸತ್_ಚಿತ್ ಆನಂದಸ್ವರೂಪ ನೀನೇ ||೧||

ಜಗದಾಧಾರ ನೀನೆ
ಜಗದ್ವ್ಯಾಪಕ ನೀನೆ
ಅಗಣಿತ ಮಹಿಮ ನೀನೆ
ಪ್ರಗತಿದಾಯಕ ನೀನೆ
ತ್ರಿಗುಣಾತೀತ ಭಗವಂತನು ನೀನೇ ||೨||

ಪೂರ್ಣ ಬ್ರಹ್ಮನು ನೀನೆ
ಮರಣ ರಹಿತ ನೀನೆ
ಕರುಣಾಸಾಗರ ನೀನೆ
ಶರಣ ರಕ್ಷಕ ನೀನೆ
ಮನದ ಕಣ್ಣಿನ ಕೊನೆಯಲ್ಲಿರುವವ ನೀನೇ ||೩||

ಜ್ಞಾನನಿಧಿಯೆ ನಿನ್ನ
ಧ್ಯಾನ ಮಾಡುವೆ ನಾನು
ಮಾನ ಕಾಯುವ ನೀನೆ
ದೀನರ ಪ್ರಭು ನೀನೆ
ಮಾನ್ಯವಂತ ಹುಲುಕುಂದ ರಾಮೇಶನೇ ||೪||

(ಹುಲುಕುಂದ ಭೀಮಕವಿ)

* * *

ಸೊಸಿ ಇದ್ದರೆ ಇರಬೇಕ ಎಂಥಾ ?

ಸೊಸಿ ಇದ್ದರೆ ಇರಬೇಕ ಎಂಥಾಕಿ
ಆ ಹೇಮರಡ್ಡಿ ಮಲ್ಲಮ್ಮನಂಥಾಕಿ ||ಪ||

ಅಕ್ಕ ಇದ್ದರೆ ಇರಬೇಕ ಎಂಥಾಕಿ
ಆ ಅಕ್ಕಮಹಾದೇವಿಯಂಥಾಕಿ
ತಂಗಿ ಇದ್ದರ ಇರಬೇಕ ಎಂಥಾಕಿ
ಆ ಕಿತ್ತೂರ ಚೆನ್ನಮ್ಮನಂಥಾಕಿ

ಮಗಳಿದ್ದರ ಇರಬೇಕ ಎಂಥಾಕಿ ।
ಆ ಬೆಳವಡಿ ಮಲ್ಲಮ್ಮ ಸಂಥಾಕಿ ।
ತಾಯಿ ಇದ್ದರೆ ಇರಬೇಕ ಎಂಥಾಕಿ ।
ಆ ಕಸ್ತೂರಿಬಾ
ಗಾಂಧಿಯವರಂಥಾಕಿ ॥೧॥

ಮಗ ಇದ್ದರ ಇರಬೇಕು ಎಂಥಾವ । ಆ ವೀರ ಅಭಿಮನ್ಯು
ವಿನಂಥಾವ ।
ತಮ್ಮಿದ್ದರೆ ಇರಬೇಕು ಎಂಥಾವ । ಪಾಂಡವರೊಳಗೆ ಭೀಮಸೇನ
ನಂಥಾವ ।
ಅಣ್ಣಿದ್ದರೆ ಇರಬೇಕು ಎಂಥಾವ । ಕುಂತಿ ಕುವರ ಧರ್ಮರಾಜ
ನಂಥಾವ ।
ತಂದಿದ್ದರೆ ಇರಬೇಕು ಎಂಥಾವ । ಗುರು ಗಾಂಧಿ ಅಜ್ಜ
ನಂಥಾವ ॥೨॥

ಸಾವಕಾರಿದ್ದರ ಇರಬೇಕು ಎಂಥಾವ । ಪಂಡಿತ ಜವಾಹರಲಾಲ
ರಂಥಾವ ।
ಬಡವರಿದ್ದರ ಇರಬೇಕು ಎಂಥಾವ ಲಾಲಬಹದ್ದೂರ ಶಾಸ್ತ್ರಿಯವ
ರಂಥಾವ ।
ಶೂರ ಇದ್ದರ ಇರಬೇಕು ಎಂಥಾವ । ಶೂರ ಸುಭಾಷ ಭೋಸ
ರಂಥಾವ ।
ದೇಶಭಕ್ತ ಇದ್ದರೆಇರಬೇಕೆಂಥಾವ।ನಮ್ಮ ಮೈಲಾರಮಹದೇವಪ್ಪ
ನಂಥಾವ ॥೩॥

ಋಷಿ ಇದ್ದರ ಇರಬೇಕು ಎಂಥಾವ । ಆ ವಾಲ್ಮೀಕಿ ಋಷಿ
ಯಂಥಾವ ।
ಶರಣರಿದ್ದರ 'ಇರಬೇಕು ಎಂಥಾವ । ಆ ಸಮಗಾರ ಹರಳಯ್ಯ
ನಂಥಾವ ।
ನುಡಿದಂತೆ ನಡಿಯಬೇಕು ಎಂಥಾವ । ಆ ಭಕ್ತ ಬಸವಣ್ಣ
ನಂಥಾವ ।
ಸಾಧು ಇದ್ದರ ಇರಬೇಕು ಎಂಥಾವ । ಸ್ವಾಮಿ ವಿವೇಕಾನಂದ
ರಂಥಾವ । ॥೪॥

ಕವಿ ಇದ್ದರ ಇರಬೇಕು ಎಂಥಾವ । ರವಿಂದ್ರನಾಥ ಟಾಗೋರ
ರಂಥಾವ ।
ಗವಾಯಿ ಇದ್ದರ ಇರಬೇಕು ಎಂಥಾವ । ಪಂಚಾಕ್ಷರಿ ಗವಾಯಿ
ಗಳಂಥಾವ ।
ಯತಿ ನಿಯಮ ಪಾಲಿಸಬೇಕು ಎಂಥಾವ । ಸರ್ವಜ್ಞಮೂರ್ತಿ
ಯಂಥಾವ ।
ಗೀಗೀ ಪದಗಳ ಹಾಡಬೇಕೆಂಥಾವ । ಹುಲುಕುಂದ ಭೀಮಕವಿ
ಯಂಥಾವ ॥೫॥

೧೨ ಒಕ್ಕಲಿಗ

ಸಣ್ಣವನಲ್ಲ ನೀ ಪುಣ್ಯವಂತನು ।
ಕಣ್ಣ ತೆರೆದು ನೋಡು ಒಕ್ಕಲಿಗ ।
ಮಣ್ಣಿನ ಸೇವಕ ನಿನ್ನ ಬಣ್ಣಿಸಲಾರೆನು ।
ಚೆನ್ನಾಗಿ ಕಾಪಾಡು ಒಕ್ಕಲಿಗ ॥ಪ॥

ಹಣ್ಣು ಹಂಪಲಾ ಧಾನ್ಯ ದವಸಗಳು ।
ನಿನ್ನಿಂದ ಜಗಕ್ಕೆಲ್ಲಾ ಒಕ್ಕಲಿಗ ।
ಹುಣ್ಣಿವಿ ಅಮಪಾಸಿ ಸಣ್ಣ ದೊಡ್ಡ ಕಾರ್ಯಗಳಿಗೆ ।
ಅನ್ನದಾತ ನೀನೇ ಒಕ್ಕಲಿ ।
ಎಣ್ಣೆ ಹೋಳಿಗೆ ದೊಣ್ಣೆ ತುಪ್ಪ ।
ಉಣ್ಣುದು ನಿನ್ನಿಂದ ಒಕ್ಕಲಿಗ ।
ಸಣ್ಣನ್ನ ಶಾಂವಿಗೆ ಚಿನ್ನಿ ಸಕ್ಕರಿ
ಗಿಣ್ಣದೂಟಕೊಡು ಒಕ್ಕಲಿಗ ।
ಸಣ್ಣಕ್ಕಿ ಸವಿ ಅನ್ನ ಬೆಣ್ಣೆ ಕೆನಿಮಸರ ।
ತಿನ್ನುವುದು ದಯ ನಿಂದು ಒಕ್ಕಲಿಗ ।
ತಣ್ಣನ್ನ ವೆ.ಜ್ಜಿಗೆ ನುಣ್ಣಗ ।
ದನಗಳ ಕಾಪಾಡು ಒಕ್ಕಲಿಗ ॥

॥ಚಾಲ॥ ಧನ್ಯವಂತ ದಯಾಸಾಗರ । ನಿನ್ನ ಉಪಕಾರ ॥
ಮುರಿಯುದ್ದಿಂಗ ರೈತಾ । ನಿನ್ನಿಂದ ವಿಶ್ವ ಸಂಪತ್ರಾ ।
ಅನ್ನಧಾನ್ಯ ಒದಗಿಸುವ ಭಾರ । ಪೂರ್ಣಹೊತ್ತ ಧೀರ ।

॥ಏರ॥ ಉನ್ನತಕ ಕೃಷಿಕರ್ಮವನ್ನು ಮಾಡುವ ।
ಕನ್ನಡ ನಾಡಿನ ಒಕ್ಕಲಿಗ ॥
ಮಣ್ಣಿನ ಸೇವಕ ಬಣ್ಣಿಸಲಾರೆನು ।
ಚೆನ್ನಾಗಿ ಕಾಪಾಡು ಒಕ್ಕಲಿಗ ॥೧॥

ನಿನ್ನ ದೇಶದೊಳು ಏನೇನ ನಡೆಸದ ।
ಮುನ್ನ ತಿಳಿಯಬೇಕ ಒಕ್ಕಲಿಗ।
ಅನ್ಯ ದೇಶದ ಅನುಭವ ತಕ್ಕೊಂಡು ।

ಅನುಕರಣ ಮಾಡಬೇಕ ಒಕ್ಕಲಿಗ ।
ಪೂಣ ಓದಿಕೊಂಡ ಜ್ಞಾನಿಯಾಗುವುದಕ್ಕ ।
ಶಿಕ್ಷಣ ಪಡೀಬೇಕ ಒಕ್ಕಲಿಗ ।
ನಿನಗೆ ತಿಳಿಯದಕ ಹಾನಿಯಾಗತದ ।
ಜಾಣತನ ಕಲಿ ಒಕ್ಕಲಿಗ ।
ನಿನ್ನ ಅನ್ನಾ ಉಂಡ ನಿನಗೆ ಮೋಸ ಮಾಡುವ ।
ಜನರು ಹೆಚ್ಚಾಗ್ಯಾರ ಒಕ್ಕಲಿಗ ।
ಮನಿ ಮುಟ್ಟ ಬಂದ ಮನಸ ।
ಒಲಿಸುವಾಗ ಬಹಳ ಎಚ್ಚರಬೇಕ ಒಕ್ಕಲಿಗ ।
॥ಚಾಲ॥ ಅನ್ಯಾಯ ತಿಳಿದುಕೊಳ್ಳುವ ಬುದ್ಧಿ । ಕಲಿತರ‌ಾಕ ।
ಸಿದ್ಧಿ ಸರಳ ಸಂಸಾರ । ಈ ಯುಗದೊಳಗಾಗತಿಯೊ ಪಾರಾ
ತನು ಮನ ಗುಣದಲಿ ಶುದ್ಧ । ಇದ್ರ ಪ್ರಸಿದ್ಧ ।
ನೀನೇ ಸರಕಾರ । ನಿನ್ನ ಕೈಯೊಳಗೆಲ್ಲಾ ಅಧಿಕಾರ ।
॥ಏರ॥ ಮಾನ್ಯವಂತ ಜನಸೇವಕ ಹುಲುಕುಂದ ।
ಭೀಮೇಶ ಹೇಳಿದ ಒಕ್ಕಲಿಗ।
ಮಣ್ಣಿನ ಸೇವಕ ಬಣ್ಣಿಸಲಾರನು ।
ಚೆನ್ನಾಗಿ ಕಾಪಾಡು ಒಕ್ಕಲಿಗ ॥೨॥

೧೪ ಎಮ್ಮಿ ಕಟ್ಟ್ಯತಾರ ಹೈನಾ ಉಣ್ಣುದಕ

ಎಮ್ಮಿ ಕಟ್ಟ್ಯತಾರ ಹೈನಾ ಉಣ್ಣುದಕ್ಕ
ಹಾಲು ಬಡುತಾರ ಚಹಾ ಕಾಫಿ ಹೆಣಕ
ಮಕ್ಕಳ ಅಳತಾವ ಗಳಕಳ । ಏನ ಹೇಳಲಿ
ಗೋಳ (ಸಿಗುವದಿಲ್ಲ) ಮಜ್ಜಿಗಿಕಾಳ ।
ನುಚ್ಚ ಉಣ್ಣುದಕ ಹುಣಸಿ । ರಟಟೆ ತಿಂ ತಾವ ಸಂಕಟಕ ॥೧॥

ಬೆಸ್ತ್ರೆ ಎಲ್ಲ ನಾರುರ ಹಸನ ಚೂಕ್ಕ |
ಚಿಮಣಿ ಎಣ್ಣೆ ಉಪ್ಪು ತರಲಾಕ |
ಹಬ್ಬ ಹುಣ್ಣಿವ್ಯಾಗ ಕಾಣುವದಿಲ್ಲ ತುಪ್ಪ |
ಮಕ್ಕಳ ಮೇಲಿ ಕೋಪ |
ಎಷ್ಟು ಕಾಡುತೀರಪ್ಪ ತಿನ್ನುದಕ |
ಹಿಂಗಂತ ಬೈಯುತ್ತಾರ ಆವಕ ||

ಹಿಂಗ ಮಾಡಿ ಗಳಿಸತಾರ ರೊಕ್ಕ |
ನ್ಯಾಯಮಾಡಿ ದಂಡ ಕೊಡಲಾಕ |
ತುಸು ಮಾತಿಗಾಗಿ ಬಡಿದಾಟ |
ಮಾಡಿ ಹೊಂಟೊಂಟ ಕೋರ್ಟಿಗೆ |
ಪುಕ್ಕಟ ಕಳೆಯುತಾರ ರೊಕ್ಕ |
ಮಾವಗಳಿಗೆ ಹೋಳಿಗೆ ಉಣಸುದಕ ||೩

ತುಪ್ಪದ ಕೊಡ ಇರತಿದ್ದು ಪೂರ್ವಕ |
ಕುಸುಬಿ ತುಂಬಿ ಇಡತ್ತಾರ ಈಗ
ಆವಕ | ಇಂಥಾ ಕಾಲ ಬಂದತಿ ಈಗ
ಮಾಡೂರ ಬಲ್ಲಾಂಗ | ಹೇಳುವೆನು
ತಗಡ ಎಲ್ಲ ಹಸನ ಚೊಕ್ಕ |
ಭೀಮರಾಯ ಬೇಡೆಂದ ಇಂಥಾ ಲೆಕ್ಕ ||೪

೧೪ ಗಾಂಧೀಜಿಯ ಮೂರು ಮಾತುಗಳು

ಬಂದ ಮಂದಿ ಆನಂದದಿ ಕೂತೀರಿ
ಇಂದಿನ ಸಭೆಯೊಳಗ |ಗ| |
ಗಾಂಧೀಜಿ ಸಾಯುವ ಮುಂದ

ಅಂದದ್ದನ್ನು ಇಂದ ಹೇಳುವ ನಿಮಗ
ನಿರಕ್ಷರಿ ಜನರು ಯಾರ್‍ಯಾರು |೧|
ಇರಬಾರ್ದು ಭರತಖಂಡದೊಳಗ
ಸ್ವರಾಜ್ಯ ಸಿಕ್ಕದಕ್ಕ ಸಾರ್ಥಕವಾಗತದರಮಂದ |ಗ| |ಗ|
ಮಾತಿನೊಳಗ |ಗ|

ಹುಟ್ಟಿದ ಮಕ್ಕಳನ್ನು ಜಟ್ಟಿಗಳನ್ನಾಗಿ
ಮಾಡ್ರಿ ಹೊಟ್ಟೆಗಾದ್ರೆ ಕ್ರಿಕಮ್ಯಾಗ |ಗ| |ಗ|
ಘಟ್ಟಿ ತರುಣರು ರಾಷ್ಟ್ರದಸಂಪತ್ತು ಶ್ರೇಷ್ಠ ಸೃಷ್ಟಿಯೊಳಗ |೩|
ಒಕ್ಕಟ್ಟ ಅದರ ದಿಕ್ಕೆಟ್ಟ ಹೋಗತದ
ಬಿಕ್ಕಟ್ಟ ಪ್ರಸಂಗ |ಗ| |ಗ|
ಪುಕ್ಕಟ್ಟ ಬಡದಾಡಿ ರೊಕ್ಕ
ಕೊಡಬ್ಯಾಡರಿ ಸಿಕ್ಕವರ ಕೈಯಾಗ |೪|
ಮೂರು ಮಾತುಗಳ ಸಾರಿ ಹೇಳಿಹೋದ್ರ
ಮಹಾತ್ಮಾಜಿ ಸಾಯುವಾಗ |ಗ
ಸಾರಿಸಾರಿ ಭಾರಿ ಜೋರಿಲೆ ಹೇಳ್ತಾಂದ
ಹುಲುಕುಂದ ಭೀಮಸಿಂಗ |

೧೫ ಬಂದಿತು ಸರ್ವರ ಭಾಗ್ಯದ ಕಾಲ

ಬಂದಿತು ಸರ್ವರ ಭಾಗ್ಯದ ಕಾಲ |
ತಂದೆ ಮಹಾತ್ಮಾಜಿ ಶಿಷ್ಯನ ಕಾಲ |
ಪ್ರೇಮದಿ ಭೂಮಿ ಹಂಚುವ ಕಾಲ |
ನೇಮದಿಂದ ದುಡಿಯುವ ರೈತನ ಕಾಲ |
ರಾಷ್ಟ್ರದುನ್ನತಿ ಆಗುವ ಕಾಲ |

ದೂರದೃಷ್ಟಿಯು ಕಟ್ಟುವ ಕಾಲ ।
ದೀನರ ವಾಣಿಯು ದಾನದ ಕಾಲ ।
ಮಾನವರಂತರ ಮಮತೆಯು ಕಾಲ ।
ಸಾಮ್ಯ ಯೋಗಿಯು ಸಮತಾ ಕಾಲ ।
ನಮ್ರ ಭಾವದಿ ನಡೆಯುವ ಕಾಲ ।
ಮಡಿವಾಳ ಶಿವಯೋಗಿ ಹಾಡುವ ಕಾಲ ।
ಸಡಗರ ಸಾಗರ ಕಾಣುವ ಕಾಲ ।

೧೬ ಯಾವುದು ಕೆಟ್ಟ

ಬಡತನದೊಳಗ ಮಕ್ಕಳ ಕೆಟ್ಟ ।
ತುಡುಗರಿಗೆ ಬೆಳದಿಂಗಳ ಕೆಟ್ಟ ।
ಹುಡುಗತನದ ಬುದ್ಧಿ ಕೆಟ್ಟ ।
ಕಿಡಿಗೇಡಿತನ ಕೆಟ್ಟ ।
ಅಡತಾರ ಹೆಂಡತಿ ಮಾತ ಕೇಳಾವ ಕೆಟ್ಟ । ||೧||
ಕೆಡವಿಲಿಂದ ನಡೆಯುವದು ಕೆಟ್ಟ ।
ಎಡವಿ ಬಿದ್ರ ಆಗುದು ನಷ್ಟ ।
ಒಡವಿ ಕಳಕೊಂಡ್ರ ಕೆಟ್ಟ ।
ಪೊಡವಿಯೊಳು ಮೂಢತನ ಕೆಟ್ಟ ।
ದುಡಿಯುವವರಿಗ ರೋಗ ಕೆಟ್ಟ ।
ನಡಿಯುವವಗ ಬರಿಗಾಲ ಕೆಟ್ಟ ।
ಕುಡಿಯುವವಗ ವ್ಯಸನ ಕೆಟ್ಟ ।
ಮಡಿಯುವವಗ ಸರ್ಪ ಕೆಟ್ಟ ।
ಧೃಡವಾದ ನಂಬಿಗಿಲ್ಲದವ ಕೆಟ್ಟ ।

ಜೋಡಿಯಿದ್ದು ಅಗಲುದು ಕೆಟ್ಟ ।
ರೂಢಿಯೊಳು ಹಾದರ ಕೆಟ್ಟ ।
ಮಾಡಿ ಮರಗುವವರ ಕೆಟ್ಟ ।
ನಾಡೊಳು ಹುಲುಕೊಂಡ ಶ್ರೇಷ್ಠ ।
ಭೀಮೇಶನ ಸವಿ ಹಸನಕಟ್ಟ ।

೧೭ ಭೂದಾನ ಚಕ್ಕಡ

(ಭೀಮಕವಿ)

ಪ್ರೇಮದಿಂದ ಗ್ರಾಮದಾನ ಬೇಡತಾನ
ವಿನೋಬಾಭಾವೆ ಮುದುಕ ।
ಗ್ರಾಮರಾಜ್ಯ ರಾಮರಾಜ್ಯ
ಧರ್ಮರಾಜ್ಯ ಸ್ವರಾಜ್ಯ ಕಟ್ಟುದಕ ।
ಹೆಚ್ಚು ಕಡಿಮೀ ಉಚ್ಚ ನೀಚ
ಭಾವದ ಹುಚ್ಚು ಬಿಡಿಸುವುದಕ್ಕ ।
ಎಚ್ಚರಾಗಿರೆಂದು ಸ್ವಚ್ಛ ಹೇಳತಾನ ಮುಂಚಿತವಾಗಿ ಜನಕ ||೨||
ತ್ಯಾಗ ಮಾರ್ಗದಿಂದ ಸಾಗಿರೆಂದು
ಈ ಯೋಗಿ ಹೇಳ್ತಾನ ಚೊಕ್ಕ ।
ಭೋಗ ಲಾಭ ಲೋಭ ನೀಗಿರೆಂದನು ಈಗಿನ
ಕಾಲಕ್ಕ ||೩||

ಭಾರತದ ದೇಶದಲ್ಲಿ ಐದು ಕೋಟಿ
ಎಕರೆ ಭೂಮಿ ಕೂಡಿಸಬೇಕ ।
ದೊರೆತುದು ದುಡಿಯುವ ಬಡವರಿಗೆಲ್ಲಾ
ಕೊಡಬೇಕೆನ್ನುವ ತೂಕ ||೪||

ಬಡತನ ಇರಬಾರದ ಸಾವಕಾರಕಿ
ಬೆಳೆಯು ಬಾರದ ಆಗ ಎಲ್ಲರಗಿ ಸುಖ |
ಒಡೆಯ ಕೂಲಿಕಾರ ರೂಢಿ ತಪ್ಪಿದರ
ಪಾಡ ಹಿಂದುಸ್ತಾನಕ ||೫||

ದಯವೇ ಧರ್ಮದ ಮೂಲ ಸರ್ವರಿಗೆ
ಸಮಪಾಲ ಗುರಿಯ ಸಾಧಿಸುವುದಕ |
ನ್ಯಾಯ ನೀತಿ ಶೀಲಪ್ರಿಯ
ಹುಲಕುಂದ ಭೀಮಕವಿ ಖಡಕ ||೬||

೧೮. ಗಾಳಿ ಬೀಸುವದು ಎಲ್ಲರಿಗಾಗಿ

ಜೈ ಜಗತ್ ಜೈ ಜಗತ್

ಗಾಳಿ ಬೀಸುವದು ಎಲ್ಲರಿಗಾಗಿ
ಮಳೆ ಬೀಳುವದು ಎಲ್ಲರಿಗಾಗಿ,
ಸೂರ್ಯ ಮೂಡುವಾ ಎಲ್ಲರಿಗಾಗಿ,
ಹಾಗೆ ಭೂಮಿ ಎಲ್ಲರಿಗೆ. .
ಎಲ್ಲರಿಗೆ ಶಿವೆ ಎಲ್ಲರಿಗೆ . .
ಎಲ್ಲಾ ಭೂಮಿ ದೇವರದು . .
ಸಂಪತ್ತೆಲ್ಲಾ ಸಮಾಜದ್ದು . .

ಜೈ ಜಗತ್

ಶಾಂತಿಕೇ ಸಿಪಾಹಿ ಚಲೇ

ಶಾಂತಿ ಕೇ ಸಿಪಾಹಿ ಚಲೇ, ಕ್ರಾಂತಿ ಕೇ ಸಿಪಾಹಿ ಚಲೇ,
ಲೇಕೆ ಪ್ಯೈರಪ್ವಾಹಿ ಚಲೇ, ರೋಕನೇ ತಬಾಹಿ ಚಲೇ, ||

ವೈರ ಭಾವ ತೋಡನೇ, ದಿಲ್ ಕೋ ದಿಲ್ ಸೆ ಜೋಡನೇ,
ಕಾಮ ಕೊ ಸಂವಾರನೇ ಜಾನ ಅಪನಿ ವಾರನೇ|| ರೋಕನೇ....

ವಿಶ್ವ ಕೇ ಯೆ ಪಾಸಬಾಂ, ಲೇಕೆ ಸೇವಾ ಕಾ ನಿಶಾನ,
ಭೀರುತಾ ಸೆ ಸಾವಧಾಂ, ಚಲ ಪಡೇ ಹೈಂ ಬೇಗುಮಾನ||
ರೋಕನೇ....

ಸತ್ಯ ಕೇ ಸಂಭಾಲ ಢಾಲ, ಅಹಿಂಸಾಕೇ ಲೇ ಮಶಾಲ,
ಧರತಿ ಮಾಂ ಕೆ ನೌನಿಹಾಲ, ಹೈಂ ನಿಕಲ ಪಡೇ ಸಂಭಾಲ||
ರೋಕನೇ

ಜಯ ಜಗತ್ ಪುಕಾರತೇ, ಬಢ ರಹೆ ಬಿನಾ ರುಕೇ
ಲೇಕೆ ದಿಲ ಕೆ ವಲ್ ವಲೇ, ಅಪನೆ ಧ್ಯೇಯ ಕೋ ಚಲೇ||
ರೋಕನೇ....

(ದುಬಾಯಲ್)

ಘೋಷಣೆಗಳು

ಭೂಮಿ ಯಾರದು ? — ದೇವರದು !
ಭೂಮಿ ಯಾರದು ? — ಎಲ್ಲರದು !
ಸಂಪತ್ತು ಯಾರದು ? — ಜನಸಾಮಾನ್ಯರದು !
ನಮ್ಮ ಮಂತ್ರ — ಜೈ ಜಗತ್ !
ನಮ್ಮ ತಂತ್ರ — ಜೈ ಗ್ರಾಮದಾನ
ಶಾಂತಿಸೇನೆ — ಕೈಲಾಸ
ಹಂಚಿ ಉಂಡರೆ — ಹಸಿವಿಲ್ಲ

ಜೈ ಜಗತ್ ಜೈ ಜಗತ್ ಜೈ ಜಗತ್

ಜೈ ಜಗತ್ ಎಂದರೇನು?

ನಾವು ಯಾರಿಗೂ ಪರರುವುದಿಲ್ಲ
ಯಾರನ್ನೂ ಪರರೆಂದು [illegible]ದಿಲ್ಲ
ಯಾರನ್ನೂ ದ್ವೇಷಿಸುವುದಿಲ್ಲ
[illegible] ಪ್ರೇಮದ [illegible] ನಮ್ಮ [illegible] !

[illegible]

ನಮಗೆ ಯಾರೂ ಶತ್ರುಗಳಿಲ್ಲ

ಇದೇ ಜೈ ಜಗತ್ ಅರ್ಥ

ವಿನೋಬಾಜಿ